E-DTN-M-JMD-7

# KANNADA

## (Compulsory)

*Time Allowed : Three Hours* | *Maximum Marks : 300*

*INSTRUCTIONS*

***Candidates should attempt ALL questions.***

***The number of marks carried by each question is indicated at the end of the question.***

***Answers must be written in Kannada, unless otherwise directed.***

***Prescribed word limit must be followed for Question No. 3.***

***The précis must be attempted ONLY on the special précis sheet(s) provided separately.***

***These précis sheets are to be securely attached to the answer-book.***

*IMPORTANT : Whenever a question is being attempted, all its parts/sub-parts must be attempted contiguously. This means that before moving on to the next question to be attempted, candidates must finish attempting all parts/sub-parts of the previous question attempted. This is to be strictly followed.*

***Pages left blank in the answer-book are to be clearly struck out in ink. Any answers that follow pages left blank may not be given credit.***

1. ಕೆಳಗಿನ ಯಾವುದಾದರೂ **ಒಂದು** ವಿಷಯವನ್ನು ಕುರಿತು ಸುಮಾರು 300 ಶಬ್ದಗಳಲ್ಲಿ ಒಂದು ಪ್ರಬಂಧವನ್ನು ಬರೆಯಿರಿ : *100*

(a) ವ್ಯಾಪಾರಿಕ ಬೆಳವಣಿಗೆ ಅಭಿವೃದ್ಧಿ ಹೊಂದುತ್ತಿರುವ ಒಂದು ಭೌಗೋಳಿಕ ಪ್ರದೇಶವಾಗಿ ಭಾರತ

(b) ನಮ್ಮ ಮಹಾನಗರಗಳು ಮಹಿಳೆಯರಿಗೆ ಎಷ್ಟು ಸುರಕ್ಷಿತ

(c) ವನ್ಯಜೀವಿಗಳ ಸಂರಕ್ಷಣೆ ಮತ್ತು ವ್ಯವಸ್ಥಾ ನಿರ್ವಹಣೆ

(d) ಭಾರತದಲ್ಲಿ ವೃತ್ತಿಪರ (ವೊಕೇಷನಲ್) ಶಿಕ್ಷಣ

(e) ಚಲನಚಿತ್ರಗಳ ಪೌರಾಣಿಕ ಜಗತ್ತು

2. ಕೆಳಗೆ ನೀಡಿರುವ ಗದ್ಯಭಾಗವನ್ನು ಓದಿ, ಕೊನೆಯಲ್ಲಿ ನೀಡಿರುವ ಪ್ರಶ್ನೆಗಳಿಗೆ ನಿಮ್ಮ ಸ್ವಂತ ಮಾತುಗಳಲ್ಲಿ ಉತ್ತರಿಸಿ. ಉತ್ತರಗಳು ನೇರ, ಸ್ಪಷ್ಟ ಮತ್ತು ಸಂಕ್ಷಿಪ್ತವಾಗಿರಬೇಕು : *6×10=60*

ಬಹುತೇಕ ಓದುಗರು ಪುಸ್ತಕವನ್ನು ಅದು ಅವರಿಗೆ ಕೊಡಬಹುದಾದ ಕ್ಷಣಿಕವಾದ ಮನರಂಜನೆಗಾಗಿ ಅಥವಾ ವಿರಾಮದ ಚಟುವಟಿಕೆ ಎಂಬಂತೆ ಓದುತ್ತಾರೆ. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ ಅವರು ಸಾಮಾನ್ಯವಾಗಿ ಕಾಲಹರಣ ಮಾಡುವ ಸಲುವಾಗಿ ಓದುತ್ತಾರೆ. ಕಾಲವನ್ನು ನಿರಂತರವಾಗಿ ಒಂದು ಮೌಲಿಕ ನಿಧಿ ಎಂಬಂತೆ ಭಾವಿಸಲಾಗಿದೆ. ಮೇಲು ನೋಟಕ್ಕೆ ನಂಬಲು ಅಸಾಧ್ಯ ಎಂದು ಅನಿಸಿದರೂ ಈ ನಿಧಿಯನ್ನು ಕಾಲ ಒಂದು ಹೊರೆಯೋ ಎಂಬಂತೆ ಓದುಗರು ಅದನ್ನು ಅಪವ್ಯಯ ಮಾಡುತ್ತಾರೆ. ಪುಸ್ತಕಗಳು ಭಾಗಷಃ ಓದದೆ ಹಾರಿಸಬಹುದಾದ ತುಣುಕುಗಳನ್ನು ಪಡೆದಿರುತ್ತವೆ ಎಂದು ಕಂಡುಕೊಂಡು ಹಾರಿಸಿ ಓದುವಿಕೆಯನ್ನು ಅವರು ಮಾಡುತ್ತಾರೆ. ಇದರಿಂದಾಗಿ ಇದಕ್ಕಿಂತ

(iv) ತಮ್ಮ ಓದನ್ನು ಮುಗಿಸಿದ ನಂತರ ಓದುಗರು ಏನನ್ನು ಮಾಡಬೇಕು ಎಂದು ಲೇಖಕರು ಅಪೇಕ್ಷಿಸುತ್ತಾರೆ ?

(v) ಪ್ರಜ್ಞಾಪೂರ್ವಕವಲ್ಲದ ಓದುವಿಕೆ ನಿರರ್ಥಕ ಎಂದು ಲೇಖಕರು ಏಕೆ ಭಾವಿಸುತ್ತಾರೆ ?

(vi) ಯಾವ ಬಗೆಯ ಓದುಗನನ್ನು ಲೇಖಕರು ಬಯಸುತ್ತಾರೆ ?

**3.** ಕೆಳಗಿನ ನೀಡಿರುವ ಗದ್ಯಭಾಗವನ್ನು ಅದರ ಮೂರನೆ ಒಂದು ಭಾಗಕ್ಕೆ ಮೀರದಂತೆ ಸಂಗ್ರಹಿಸಿ ಬರೆಯಿರಿ. ಸಂಗ್ರಹಲೇಖದ ನಿಗದಿಯಾದ ಪದಗಳ ಮಿತಿಗಿಂತ ಚಿಕ್ಕದಾಗಿದ್ದರೆ ಅಥವಾ ದೊಡ್ಡದಾಗಿದ್ದರೆ ಅಂಕಗಳನ್ನು ಕಳೆಯಲಾಗುವುದು. ಸಂಗ್ರಹಲೇಖವನ್ನು ಅದಕ್ಕಾಗಿಯೇ ನೀಡಲಾಗಿರುವ ಪ್ರತ್ಯೇಕವಾದ ಹಾಳೆಗಳಲ್ಲಿ ಬರೆಯಬೇಕು, ಅನಂತರ ಅದನ್ನು ಉತ್ತರ ಪತ್ರಿಕೆಗೆ ಭದ್ರವಾಗಿ ಸೇರಿಸಿ ಕಟ್ಟಬೇಕು. *60*

ನೀರು ಭೂಮಿಯ ಮೇಲೆ ಅತ್ಯಂತ ಸಾಮಾನ್ಯವಾಗಿ ಹಾಗೂ ವ್ಯಾಪಕವಾಗಿ ಕಂಡುಬರುವ ವಸ್ತುವಾಗಿದೆ ಮತ್ತು ಭೂಮಿಯ ಶೇಕಡಾ 70 ರಷ್ಟು ಭಾಗವನ್ನು ಆಕ್ರಮಿಸಿಕೊಂಡಿದೆ. ಜಗತ್ತಿನ ಒಟ್ಟು ನೀರಿನ ಭಾಗ 1·386 ಬಿಲಿಯನ್ ಘನ ಕಿಲೋಮೀಟರ್ ಗಳಷ್ಟಿದ್ದು ಅದರಲ್ಲಿ ಸುಮಾರು ಶೇಕಡಾ 97 ರಷ್ಟು ಉಪ್ಪು ನೀರಾಗಿದೆ ಹಾಗೂ ಯಾವುದೇ ಬಗೆಯ ಬಳಕೆಗೆ ಬಾರದಂತಾಗಿದೆ. ಉಳಿದ ಶೇಕಡಾ 3 ಭಾಗ ಸಿಹಿ ನೀರಾಗಿದ್ದು ಬಳಕೆಗೆ ಸೂಕ್ತವಾದ ನೀರಾಗಿದೆ. ಆದರೆ ಶೇಕಡಾ 68·5 ರಷ್ಟು ಭಾಗದ ಬಳಕೆಗೆ ಸೂಕ್ತವಾದ ನೀರು ಹಿಮಾಚ್ಛಾದಿತ ಬೆಟ್ಟಗಳು, ಹಿಮನದಿಗಳು ಹಾಗೂ ಶಾಶ್ವತ ರೂಪದ ಹಿಮವಾಗಿ ಮನುಷ್ಯರ

ಬಳಕೆಗೆ ಬಾರದಂತಾಗಿದೆ. ಈ ಬಳಕೆಗೆ ಸೂಕ್ತವಾದ ನೀರಿನ ಸುಮಾರು ಶೇಕಡಾ 30 ರಷ್ಟು ಭಾಗ ಭೂ ಅಂತರ್ಗತ ಜಲವಾಗಿದ್ದು ಕೇವಲ ಸುಮಾರು ಶೇಕಡ 0·9 ರಷ್ಟು ಭಾಗ ಭೂಮಿಯ ಮೇಲಿನ ನೀರಾಗಿದೆ ಹಾಗೂ ನದಿಗಳು, ಹೊಳೆಗಳು ಮತ್ತು ಸರೋವರಗಳಲ್ಲಿ ಅಡಗಿದೆ. ಬಳಕೆಗೆ ಸೂಕ್ತವಾದ ನೀರಿನ ನಮ್ಮ ಅವಲಂಬನೆಯಲ್ಲಿ ಬಹುತೇಕ ದೈನಂದಿನವಾಗಿ ಸುಮಾರು 70 ಘನ ಕಿಲೋಮೀಟರಿನಷ್ಟು ಭಾಗ ಹರಿಯುವ ನದಿ, ಹೊಳೆ ಹಾಗೂ ಸರೋವರಗಳಿಂದಲೂ ಸುಮಾರು 70 ಘನ ಕಿಲೋಮೀಟರಿನಷ್ಟು ಭಾಗ ಭೂ ಅಂತರ್ಗತ ಜಲಾಶಯಗಳಿಂದಲೂ ಬರುತ್ತದೆ. ಈ ಬಗೆಯ ನೀರಿನ ಬಳಕೆ ಸಾವಿರಾರು ವರ್ಷಗಳಿಂದ ಹೆಚ್ಚು ಏರುಪೇರಿಲ್ಲದೆ ನಿರಂತರವಾಗಿ ನಡೆದುಕೊಂಡು ಬಂದಿದೆ. ಆದರೆ ನೀರಿನ ಬೇಡಿಕೆ ಏರುಮುಖವಾಗುತ್ತಿದ್ದು, ಅದರಲ್ಲೂ ಕಳೆದ ಕೆಲವು ದಶಕಗಳಲ್ಲಿ ಹೆಚ್ಚಿದ ಗೃಹೋಪಯುಕ್ತ ಬಳಕೆ, ಕೃಷಿ ಹಾಗೂ ಔದ್ಯಮಿಕ ಚಟುವಟಿಕೆಗಳಿಂದಾಗಿ ವಿಶೇಷವಾಗಿ ಹೆಚ್ಚುತ್ತಿದೆ. 1940 ರಲ್ಲಿ ಜಗತ್ತಿನ ಜನಸಂಖ್ಯೆ 2 ಬಿಲಿಯನ್ ಇದ್ದಾಗ ವ್ಯಕ್ತಿಗತ ವಾರ್ಷಿಕ ನೀರಿನ ಬಳಕೆ 1,000 ಘನ ಮೀಟರ್ ಗಳಿಗಿಂತ ಕಡಿಮೆ ಇತ್ತು. ಕ್ರಿ.ಶ. 2000 ದ ವೇಳೆಗೆ ಜಗತ್ತಿನ ಜನಸಂಖ್ಯೆ 6 ಬಿಲಿಯನ್‌ಗೆ ಏರಿತಲ್ಲದೆ ವ್ಯಕ್ತಿಗತ ವಾರ್ಷಿಕ ನೀರಿನ ಬಳಕೆ 6,000 ಘನ ಮೀಟರಗಳಿಗೆ ಏರಿ ಬಳಕೆಗೆ ಸೂಕ್ತವಾದ ನೀರಿನ ಮೇಲೆ ಒತ್ತಡವನ್ನು ತಂದಿದೆ. ಅದರಲ್ಲೂ ಜನಸಂಖ್ಯಾ ಪ್ರಮಾಣ ಹೆಚ್ಚಾಗಿರುವ ಭೂಭಾಗಗಳಲ್ಲಿ ಹಾಗೂ ಬಳಕೆ ನೀರಿನ ಪ್ರಮಾಣದ

ಕೊರತೆ ಇರುವ ಭೂಭಾಗಗಳಲ್ಲಿ ವಿಶೇಷವಾದ ಒತ್ತಡವನ್ನು ತಂದಿದೆ. ಅಲ್ಲದೆ ಬಳಕೆಗೆ ಸೂಕ್ತವಾದ ನೀರಿನ ಪ್ರಮಾಣದ ಶೇಕಡ 70 ರಷ್ಟು ಭಾಗವನ್ನು ಕೃಷಿಯೂ, ನಂತರದ ಸ್ಥಾನವನ್ನು ಔದ್ಯಮಿಕ ಕ್ಷೇತ್ರವೂ (ಶೇಕಡ 22 ಭಾಗ) ಹಾಗೂ ಗೃಹೋಪಯೋಗಿ ಬಳಕೆಯೂ (ಶೇಕಡ 8 ಭಾಗ) ಆಕ್ರಮಿಸಿಕೊಂಡಿವೆ. ಬಳಕೆಗೆ ಸೂಕ್ತವಾದ ಶುದ್ಧನೀರು ಒಂದತ್ತ ಜನಸಂಖ್ಯಾ ಸ್ಫೋಟದಿಂದ ಹಾಗೂ ಇನ್ನೊಂದತ್ತ ಏರುತ್ತಿರುವ ಶುದ್ಧನೀರಿನ ಬೇಡಿಕೆಯಿಂದಾಗಿ ನಿಧಾನವಾಗಿ ಅಪರೂಪದ ವಸ್ತುವಾಗುತ್ತಿದೆ. ಈಗಾಗಲೇ ಉಪಲಬ್ಧವಿರುವ ಬಳಕೆಗೆ ಸೂಕ್ತವಾದ ನೀರಿನ ಅರ್ಧದಷ್ಟು ಭಾಗವನ್ನು ಪ್ರತಿವರ್ಷದ ಬಳಕೆಗೆಂದು ಉಪಯೋಗಿಸಲಾಗುತ್ತದೆ. ಜನಸಂಖ್ಯಾ ಹೆಚ್ಚಳ ಹಾಗೂ ಏರುಮುಖವಾದ ಬಳಕೆಗಳಿಂದಾಗಿ ಈ ಉಪಯೋಗ 2050 ರ ಬೇಳೆಗೆ ಶೇಕಡ 74 ರಷ್ಟಕ್ಕೆ ಏರಬಹುದು. ಜಗತ್ತಿನ ಎಲ್ಲಡೆಯಲ್ಲೂ ಜನ ಸರಾಸರಿ ಅಮೆರಿಕನ್ ವ್ಯಕ್ತಿಯಂತೆ ನೀರನ್ನು ದುಂದುವೆಚ್ಚ ಮಾಡಲು ಆರಂಭಿಸಿದರೆ ನೀರಿನ ಬೇಡಿಕೆ ಸುಮಾರು ಶೇಕಡ 90 ರಷ್ಟು ಪ್ರಮಾಣಕ್ಕೆ-ಏರಬಹುದು.

ಬಳಕೆಗೆ ಸೂಕ್ತವಾದ ನೀರಿನ ಒಂದು ಗಮನಾರ್ಹ ವೈಲಕ್ಷಣ್ಯವೆಂದರೆ ಅದು ಜಗತ್ತಿನಾದ್ಯಂತ ಸರಿಸಮವಾಗಿ ವಿತರಣೆಯಾಗದೆ ಇರುವುದಾಗಿದೆ. ಜಗತ್ತಿನಲ್ಲಿ ಬಳಕೆಗೆ ಸೂಕ್ತನೀರು ಹೇರಳವಾಗಿ ಉಪಲಬ್ಧವಿರುವಿಕೆಯಿಂದ ಹಿಡಿದು ಅದರ ತೀವ್ರ ಕೊರತೆಯಿರುವ ದೇಶಗಳಲ್ಲಿ ಹಂಚಿದ್ದು, ಗ್ರೀನ್‌ಲ್ಯಾಂಡ್‌ನಂತಹ ದೇಶಗಳು 10,767 ಮಿಲಿಯನ್ ಘನ ಮೀಟರ್‌ನಷ್ಟು ಬಳಕೆಗೆ ಸೂಕ್ತ ಜಲವನ್ನು ಹೊಂದಿದ್ದರೆ ಕುವೈತ್ ನಂತಹ ದೇಶಗಳು ಕೇವಲ

10 ಘನ ಮೀಟರ್‌ನಷ್ಟು ಬಳಕೆಗೆ ಸೂಕ್ತ ಜಲವನ್ನು ಹೊಂದಿವೆ. ಭಾರತದಲ್ಲಿ ವ್ಯಕ್ತಿಗತ ವಾರ್ಷಿಕ ಬಳಕೆಗೆ ಸೂಕ್ತ ನೀರಿನ ಪ್ರಮಾಣ 1951 ರಲ್ಲಿ 5,177 ಘನ ಮೀಟರ್‌ಗಳಾಗಿತ್ತು. 2001 ರವೇಳೆಗೆ ಈ ಲಭ್ಯತೆಯ ಪ್ರಮಾಣ 1,820 ಘನ ಮೀಟರ್‌ಗಳಿಗೆ ಕುಗ್ಗಿತಲ್ಲದೆ ಭಾರತವನ್ನು ನೀರಿನ ಕೊರತೆ ಇರುವ ದೇಶಗಳ ಗುಂಪಿಗೆ ತಂದಿತು. ಸುಮಾರು 2025 ರ ವೇಳೆಗೆ ನಮ್ಮ ಬಳಕೆಗೆ ನೀರಿನ ಲಭ್ಯತೆ ವ್ಯಕ್ತಿಗತವಾಗಿ 1,340 ಘನ ಮೀಟರ್‌ಗಳಿಗೆ ಕುಗ್ಗಬಹುದೆಂದು ಅಂದಾಜು ಮಾಡಲಾಗಿದೆ.

ಜಗತ್ತಿನ ಬಹುತೇಕ ದೊಡ್ಡ ನದಿಗಳು ಹಾಗೂ ಅವುಗಳ ಉಪನದಿಗಳು ಒಂದಕ್ಕಿಂತ ಹೆಚ್ಚು ದೇಶಗಳ ಮೂಲಕ ಹರಿಯುತ್ತವೆ. ಉದಾಹರಣೆಗೆ ಗಂಗಾನದಿ ಮತ್ತು ಅದರ ಉಪನದಿಗಳು ನೇಪಾಳ, ಭಾರತ ಮತ್ತು ಬಂಗ್ಲಾದೇಶಗಳ ಮೂಲಕ ಹಾಗೂ ಸಿಂಧೂ ಮತ್ತು ಅದರ ಉಪನದಿಗಳು ಭಾರತ ಮತ್ತು ಪಾಕಿಸ್ತಾನಗಳ ಮೂಲಕ ಹರಿಯುತ್ತವೆ, ಯೂರೋಪಿನ ಡಾನ್ಯೂಬ್ ನದಿಯು ಜರ್ಮನಿಯಲ್ಲಿ ಹುಟ್ಟಿ ಆಸ್ಟ್ರಿಯಾ, ಸ್ಲೋವಾಕಿಯಾ, ಹಂಗರಿ, ಕ್ರೋಷಿಯಾ, ಸರ್ಬಿಯಾ, ರೊಮಾನಿಯಾ, ಬಲ್ಗೇರಿಯಾ, ಮಾಲ್ಡೀವಿಯಾ ಮತ್ತು ಯುಕ್ರೇನ್‌ಗಳ ಮೂಲಕ ಹರಿಯುತ್ತವೆ. ಹಾಗೇ ಜಾಂಬೆಸಿ ನದಿಯು ಜಾಂಬಿಯಾ, ಅಂಗೋಲಾ, ನಮೀಬಿಯಾ, ಬೋಟ್ಸ್‌ವಾನಂ, ಜಿಂಬಾವೆ ಮತ್ತು ಮೊಜಾಂಬಿಕ್‌ಗಳ ಮೂಲಕ ಹರಿಯುತ್ತವೆ. ಈಜಿಪ್ಟಿನ ಜೀವನನಾಡಿ ಎಂದು ಹೇಳಲಾಗುವ ನೈಲ್ ನದಿಯು ಎಂಟು ಬೇರೆ ಬೇರೆ ದೇಶಗಳಲ್ಲಿ ಹುಟ್ಟಿ ಹರಿದು

ಸುಡಾನ್, ಇಥಿಯೋಪಿಯಾ, ಕೆನ್ಯಾ, ರವಾಂಡಾ, ಬುರುಂಡಿ, ಉಗಾಂಡಾ, ಟಾಂಜಾನಿಯಾ ಮತ್ತು ಜೈರ್ ದೇಶಗಳಲ್ಲಿ ತನ್ನ ಪಾತ್ರಪ್ರದೇಶವನ್ನು ರೂಪಿಸಿಕೊಂಡಿದೆ. ನದಿಯೊಂದು ಒಂದಕ್ಕಿಂತ ಹೆಚ್ಚು ದೇಶಗಳ ಮೂಲಕ ಹರಿದು ಹೋದಾಗ ಉಪಲಬ್ಧವಿರುವ ನೀರಿನ ಬಳಕೆಯನ್ನು ಕುರಿತಂತೆ ತಟವರ್ತಿ ದೇಶಗಳ ನಡುವೆ ಯಾವಾಗಲೂ ವಾದ-ವಿವಾದಗಳು ತಲೆದೋರುತ್ತವೆ. ಅಂತಹ ವಾದ-ವಿವಾದಗಳು ಚಾರಿತ್ರಿಕವಾಗಿ ಕ್ರಿ.ಪೂ. 3000 ದಷ್ಟು ಪ್ರಾಚೀನವಾದವುಗಳಾಗಿದ್ದು ದಕ್ಷಿಣ ಮತ್ತು ಮಧ್ಯ ಏಷ್ಯಾದ ಭಾಗಗಳು, ಮಧ್ಯ ಯೂರೋಪಿನ ಹಾಗೂ ಮಧ್ಯ ಪೂರ್ವ ದೇಶಗಳಲ್ಲಿ ಕಂಡುಬರುತ್ತವೆ. ಒಂದತ್ತ ಕೃಷಿ, ಔದ್ಯೋಗಿಕ ಹಾಗೂ ಗೃಹಬಳಕೆಗಾಗಿ ಏರುತ್ತಿರುವ ಬಳಕೆಗೆ ಸೂಕ್ತ ನೀರಿನ ಬೇಡಿಕೆಯಿಂದಾಗಿ ಇಂತಹ ವಾದ-ವಿವಾದಗಳು ಆತಂಕಕಾರಿ ಸ್ವರೂಪವನ್ನು ಪಡೆಯುತ್ತವಲ್ಲದೆ, ಇನ್ನೊಂದತ್ತ ಆಗಾಗ ಆಕ್ರಮಣಕಾರಿ ನಿಲುವುಗಳಿಗೆ ಕೂಡ ಎಡೆ ಮಾಡಿಕೊಟ್ಟಿವೆ.

ದೇಶದ ಒಳಗೇ ಹರಿಯುವ ಬಳಕೆಗೆ ಸೂಕ್ತ ನೀರಿನ ಉಪಯೋಗವನ್ನು ಕುರಿತಂತೆ ಸ್ಥಳೀಯ ಹಾಗೂ ಪ್ರಾದೇಶಿಕ ಮಟ್ಟದಲ್ಲಿ ಕೂಡ ಸಂವೇದನಾಶೀಲ ವಿಷಯವಾಗಲು ಸಾಧ್ಯವಿದೆ. ಗೌತಮ ಬುದ್ಧನು (ಕ್ರಿ.ಪೂ. 563 – 483) ಶಾಕ್ಯ ಹಾಗೂ ಕೋಟಿಯಾ ಸಮುದಾಯಗಳ ನಡುವೆ ರೋಹಿಣೀ ನದಿಯ ನೀರನ್ನು ಬಳಸುವ ಬಗ್ಗೆ ಉಂಟಾದ ಕಿತ್ತಾಟದಲ್ಲಿ ಮಧ್ಯ ಪ್ರವೇಶ ಮಾಡಿ ರಾಜಿ ಮಾಡಿಸಬೇಕಾಯಿತು ಎಂಬುದನ್ನು ನಾವು ನೆನಪಿನಲ್ಲಿಡಬೇಕಾಗಿದೆ.

4. ಈ ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಅನುವಾದ ಮಾಡಿ : *20*

I remember my father starting his day at 4 a.m. by reading the namaz before dawn. After the namaz, he used to walk down to a small coconut grove we owned, about 4 miles from our home. He would return, with about a dozen coconuts tied together thrown over his shoulder, and only then would he have his breakfast. This remained his routine even when he was in his late sixties.

I have throughout my life tried to emulate my father in my own world of science and technology. I have endeavoured to understand the fundamental truths revealed to me by my father, and feel convinced that there exists a divine power that can lift one up from confusion, misery, melancholy and failure, and guide one to one's true place. And once an individual severs his emotional and physical bondage, he is on the road to freedom, happiness and peace of mind.

5. ಕೆಳಗೆ ನೀಡಿರುವ ಗದ್ಯಭಾಗವನ್ನು ಇಂಗ್ಲಿಷಿಗೆ ಅನುವಾದ ಮಾಡಿ : *20*

ಆಸ್ಪತ್ತೆಗಳು ತಮ್ಮ ಆರಂಭವನ್ನು ಬಹುಪ್ರಾಚೀನ ಕಾಲದಿಂದ ಪಡೆದಿದ್ದು ಕ್ರಿಸ್ತ ಶಕೆಯ ಆರಂಭಕ್ಕೆ ಮೊದಲೇ ಈ ವಿಶಿಷ್ಟ ಗೌರವವನ್ನು ಗ್ರೀಸ್, ಈಜಿಪ್ಟ್ ಮತ್ತು ಭಾರತಗಳು ಪಡೆಯುತ್ತವೆ. ಇಂದು ಜಗತ್ತಿನ ಬಹುತೇಕ ದೇಶಗಳಲ್ಲಿ ಉತ್ತಮ ಮಟ್ಟದ ಸಾರ್ವಜನಿಕ ಆಸ್ಪತ್ರೆಗಳಿದ್ದು ಅವು ಎಲ್ಲ ಬಗೆಯ ರೋಗಗಳಿಗೆ ಚಿಕಿತ್ಸೆ, ಹಾಗೂ ಸಮರ್ಪಕವಾದ ತರಬೇತಿ ಮತ್ತು ಸಂಶೋಧನಾ ವ್ಯವಸ್ಥೆಯನ್ನು ಒಳಗೊಂಡ ಆಸ್ಪತ್ರೆಗಳಾಗಿವೆ. ಅಲ್ಲದೆ ಅಸಂಖ್ಯಾತ ಚಿಕ್ಕ ಆಸ್ಪತ್ರೆಗಳು ಮತ್ತು ವೈದ್ಯಕೀಯ ಸಂಸ್ಥೆಗಳು ತಮ್ಮಲ್ಲಿ ವಿಶಿಷ್ಟವಾದ ರೋಗ ಚಿಕಿತ್ಸೆಗಳಿಗೇ ಸೀಮಿತವಾದ ಅಥವಾ ಮಹಿಳೆಯರ ಮತ್ತು ಮಕ್ಕಳ ವೈದ್ಯಕೀಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಚಿಕಿತ್ಸೆ ನೀಡುವ ಆಸ್ಪತ್ರೆಗಳಾಗಿವೆ. ಯುನೈಟೆಡ್ ಕಿಂಗ್‌ಡಮ್ ಮತ್ತು ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾಗಳಲ್ಲಿ ಸರ್ಕಾರ ಅಥವಾ ಮುನಿಸಿಪಾಲಿಟಿಗಳು ಆಸ್ಪತ್ರೆಗಳಿಗೆ ಸಬ್ಸಿಡಿಯನ್ನು ನೀಡುತ್ತವಲ್ಲದೆ ಅವುಗಳ ಆಡಳಿತಾತ್ಮಕ ನಿರ್ವಹಣೆಯನ್ನು ಮಾಡುವುದು ಕೂಡ ಸಾಧ್ಯವಾಗಿದೆ. ಈ ಕಾರ್ಯವಿಧಾನ ವೈದ್ಯಕೀಯ ಚಿಕಿತ್ಸೆಯಲ್ಲಿ ಅಡೆತಡೆಗಳನ್ನು ಹಾಗೂ ಆರ್ಥಿಕ ಮುಗ್ಗಟ್ಟನ್ನು ನಿವಾರಿಸುತ್ತದಲ್ಲದೆ ಇಡೀ ಸಮುದಾಯದ ಅನುಕೂಲಗಳಿಗೆ ಸಂಬಂಧಿಸಿದಂತೆ ಸುವ್ಯವಸ್ಥಿತ ವ್ಯವಸ್ಥೆಯೊಂದನ್ನು ತರಲು ಸಹಾಯ ಮಾಡುತ್ತದೆ. ಆದರೆ ಇದು ಇಡೀ ವೈದ್ಯಕೀಯ ವ್ಯವಸ್ಥೆಯನ್ನು ಒಂದು ಚುರುಕಿಲ್ಲದ, ಯಾಂತ್ರಿಕವಾದ, ಹೃದಯಹೀನ ಕಾರ್ಯ ಚಟುವಟಿಕೆ ಮತ್ತು ಕಾರ್ಯಕ್ಷಮತೆಯಲ್ಲಿ ಜಡತ್ವ ಉಳ್ಳ ವ್ಯವಸ್ಥೆಯನ್ನಾಗಿಸುವುದಲ್ಲದೆ ಅವುಗಳಿಗೆ ಸಮರ್ಪಕವಾದ ಕಟು ಟೀಕೆಯಿಂದ ವಂಚಿತಗೊಳಿಸಿ ದುಂದುವೆಚ್ಚದ ವ್ಯವಸ್ಥೆಯನ್ನಾಗಿಸ ಬಹುದು.

6. (a) ಕೆಳಗೆ ನೀಡಿರುವ ವಿಷಯಗಳಲ್ಲಿ **ಒಂದನ್ನು** ಕುರಿತು 200 ಪದಗಳಿಗೆ ಮೀರದಂತೆ ಪತ್ರಿಕಾ ಸಂಪಾದಕರಿಗೆ ಒಂದು ಪತ್ರವನ್ನು ಬರೆಯಿರಿ : *20*

(i) ಪಶ್ಚಿಮ ಘಟ್ಟಗಳು : ಜಾಗತಿಕ ಹಾಗೂ ಸ್ಥಳೀಯ ಆಯಾಮಗಳು

(ii) ಭ್ರಷ್ಟಾಚಾರ ಮತ್ತು ಸಂವಹನ ಮಾಧ್ಯಮಗಳ ಹೊಣೆಗಾರಿಕೆ

(iii) ಸಾಹಿತ್ಯ ಮತ್ತು ಕಲೆಯ ಅಧ್ಯಯನಕ್ಕೆ ಅಗತ್ಯವಾದ ಆರ್ಥಿಕ ಸಹಾಯ.

(b) ಕೆಳಗೆ ನೀಡಿರುವ ಹೇಳಿಕೆಗಳಲ್ಲಿ ಯಾವುದಾದರೂ **ಒಂದು** ಅರ್ಥ, ಸಂದರ್ಭ ಮತ್ತು ಸ್ವಾರಸ್ಯಗಳನ್ನು ವಿವರಿಸಿ : *10*

(i) ಈಸಬೇಕು ಇದ್ದು ಜೈಸಬೇಕು

(ii) ಉಳ್ಳವರು ಶಿವಾಲಯವ ಮಾಡುವರು, ನಾನೇನ ಮಾಡಲಯ್ಯಾ, ಬಡವನಯ್ಯಾ

(iii) ಆರಂಕುಸ ಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ

(iv) ಹುಣ್ಣಿಮಿ ಚಂದಿರನ ಹೆಣಾ ತೇಲಿ ಬಂತೋ ಹಗಲಾಗಿ

(c) ಕೆಳಗಿನ ವಾಕ್ಯಗಳಲ್ಲಿ ಖಾಲಿಬಿಟ್ಟಿರುವ ಜಾಗವನ್ನು ಸೂಕ್ತ ಪದಗಳಿಂದ ಭರ್ತಿಮಾಡಿ : *10*

(i) 'ಹಾರಿಸಿ, ಏರಿಸಿ, ಕನ್ನಡದ ಬಾವುಟ' — ಈ ಕವನದ ಕರ್ತೃ .............. .

(ii) 'ರಾಮನಾಥ' ಎಂಬ ಅಂಕಿತದಲ್ಲಿ ವಚನಗಳನ್ನು ಬರೆದವರು ............. .

(iii) 'ಸಾಹಸ ಭೀಮ ವಿಜಯಂ' ಎಂಬ ಕೃತಿಯನ್ನು ಬರೆದ ಕವಿ .............. .

(iv) ಮಾಸ್ತಿವೆಕಬೇಶ ಅಯ್ಯಂಗಾರ್ ಅವರಿಗೆ ಜ್ಞಾನಪೀಠ ಪ್ರಶಸ್ತಿ ತಂದ ಕೃತಿಯ ಹೆಸರು ........... .

(v) ಕನ್ನಡದಲ್ಲಿ ಬಂದ ಮೊಟ್ಟಮೊದಲ ನಾಟಕದ ಹೆಸರು .............. .

(vi) 'ಸಂಸ್ಕಾರ' ಕಾದಂಬರಿಯನ್ನು ಬರೆದವರು ........... .

(vii) ರವೀಂದ್ರನಾಥ ಠಾಕೂರ್ ಅವರಿಗೆ ನೊಬೆಲ್ ಪ್ರಶಸ್ತಿ ತಂದುಕೊಟ್ಟ ಕೃತಿಯ ಹೆಸರು ............. .

(viii) ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ತಮ್ಮ ಛಾಯಾಗ್ರಹಣಕ್ಕಾಗಿ ಪಡೆದ ಕನ್ನಡಿಗರ ಹೆಸರು .............. .

(ix) ಕರಾವಳಿಯ ಯಕ್ಷಗಾನದ ಎರಡು ಪ್ರಭೇದಗಳು ಯಾವುವೆಂದರೆ ............. ಮತ್ತು ........... .

(x) ಮೈಸೂರು, ರಾಜಸ್ಥಾನದಲ್ಲಿದ್ದು, ಕಲ್ಕತ್ತೆಯ ಸ್ಕೂಲ್ ಆಫ್ ಆರ್ಟ್ಸ್ ನಲ್ಲಿ ಅವನೀಂದ್ರ ನಾಥ ಠಾಕೂರರ ವಿದ್ಯಾರ್ಥಿಯಾಗಿದ್ದ ಕರ್ನಾಟಕದ ಸುಪ್ರಸಿದ್ಧ ಚಿತ್ರಕಾರರ ಹೆಸರು .............. .